ಗೋಪಾಲಕೃಷ್ಣ ಪೈ

# ಚಂದ್ರನ ಮೇಲೆ ಕಾಲು

**The lunatic, the lover and the poet**
**Are of imagination all compact**
**One sees more devils than vast hell can hold**
**–William Shakespeare**
**(in Midsummer night's dream : Act V Scene 1)**

ನನ್ನ ಗೆಳೆಯನೊಬ್ಬನ ಮನೆಗೆ ಭೇಟಿ ಕೊಟ್ಟಾಗ ಅಲ್ಲಿ ತೀರ ಮನಃಸ್ವಾಸ್ಥ್ಯವಿಲ್ಲದ ಒಬ್ಬರು ಮುದುಕರನ್ನು ಕಂಡೆ. ಸದಾ ಆಕಾಶ ನೋಡುತ್ತಾ ತಮ್ಮಲ್ಲೇ ಏನನ್ನೋ ಗುಣುಗುಣಿಸುತ್ತಾ ಕೂತಿರುತ್ತಿದ್ದ ಅವರ ಚರ್ಯೆ ವಿಚಿತ್ರವಾಗಿತ್ತು. ಅನೇಕ ವರ್ಷಗಳಿಂದ ಹುಚ್ಚು ಹಿಡಿದು ಸ್ಥಿಮಿತ ಕಳೆದುಕೊಂಡ ಅವರು ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವೀಧರರು ಎಂದು ಗೆಳೆಯ ಹೇಳಿದಾಗ ನನಗೆ ಅವರ ಬಗ್ಗೆ ಕುತೂಹಲವಾಯಿತು.

ಆ ಮುದುಕರು ನನ್ನ ಗೆಳೆಯನ ಚಿಕ್ಕಪ್ಪ. ಹೆಸರು ಸೂರ್ಯನಾರಾಯಣ ರಾವ್. ಸ್ನಾತಕೋತ್ತರ ಪದವಿ ಮುಗಿಸಿ ಅವರು ಸ್ಥಳೀಯ ಕಾಲೇಜೊಂದರಲ್ಲಿ ಪ್ರಾಧ್ಯಾಪಕರಾಗಿದ್ದರು. ಪಾಠವನ್ನು ಚೆನ್ನಾಗಿ



ಕಲೆ: ವಾಗೀಶ ಹೆಗಡೆ